# SSLC MODEL QUESTION PAPER-I, 2019

## SUBJECT : II LANGUAGE KANNADA

Time : 2.30hrs. Marks : 80

### ಭಾಗ-ಎ

❖ ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 8x1=8

1. ಸಸ್ತನಿಗಳ ಆಶ್ರಯದಾಣಗಳು ಯಾವುವು?
2. ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು?
3. ಈ ನಾಡಿನ ಬೆನ್ನೆಲುಬು ಯಾರು?
4. ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದರು?
5. ಅಡಿಗರ ಪ್ರಕಾರ ಪೌರುಷದ ಬಾಳ್ವೆ ಯಾವುದು?
6. ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದುದ್ದೇನು?
7. ಬನದ ಗೋಪಾಲ ಯಾರು?
8. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?

❖ ಈ ಕೆಳಗಿನ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರ ಬರೆಯಿರಿ. 11x2=22

9. ಗೋಪಾಲನ ತಾಯಿ ಬಡತನದಿಂದ ಹೇಗೆ ಜೀವನ ನಡೆಸುತ್ತಿದ್ದಳು?
10. ಥೇಮ್ಸ್ ನದಿಯ ಮೇಲಿರುವ ಪ್ರಸಿದ್ಧ ಸೇತುವೆಗಳಾವುವು?
11. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?
12. ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು?
13. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು?
14. ಮಾನವನ ಬದುಕು ಕರ್ಪೂರದಂತೆ ಇರಬೇಕು. ಏಕೆ?
15. ಕುಣಿಗಲ್ ಕೆರೆಯ ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?
16. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ?
17. ವೈದ್ಯರು ತಮ್ಮ ವೃತ್ತಿಯ ಕುರಿತು ಹೆಂಡತಿ ರತ್ನಳಿಗೆ ಏನು ಹೇಳಿದರು?
18. ನಾಗರಿಕತೆಯ ಬೆಳವಣಿಗೆಯ ಬಗ್ಗೆ ಕವಯಿತ್ರಿಗೆ ಯಾವ ಅಳುಕು ಇತ್ತು.
19. ಲಂಡನ್ನಿನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ ವಿಚಾರಗಳೇನು?

❖ ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 2x3=6

20. "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ."
21. "ನಮ್ರತೆಗೆ ನಾ ಕರಗುತ್ತೇನೆ."

❖ ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.

22. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು 2x3=6
23. ಎಂ. ಗೋಪಾಲಕೃಷ್ಣ ಅಡಿಗ

❖ ಈ ಕೆಳಗಿನ ಪದ್ಯಭಾಗವನ್ನು ಪೂರ್ಣ ಮಾಡಿ ಬರೆಯಿರಿ. 1x3=3

24. ಕೊರಡ ಕೊನರಿಸಿ......................
..........................................
..........................................
............................ಮತ್ತೇರಿದೆ.

ಅಥವಾ

ಯುಗದ ಹಿಂದಿನ..........................
..........................................
..........................................
..................................ಸವಿಚೈತ್ರವು

2x4=8

❖ ಈ ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.

25. ಅಂಗ ಹೀನತೆ ಸಾಧನೆಗೆ ಅಡ್ಡಿಯಾಗದು ಎಂಬ ಮಾತು ಪುಟ್ಟರಾಜರ ಜೀವನದಲ್ಲಿ ನಿಜವಾಗಿದೆ. ಹೇಗೆ? ಸಮರ್ಥಿಸಿ.

ಅಥವಾ

ಪುಟ್ಟಯ್ಯ ಸಮಾಜಕ್ಕೆ ಮುಡುಪಾದ ಪ್ರಸಂಗವನ್ನು ವಿವರಿಸಿ.

26. ಅರ್ಜುನ ಮತ್ತು ಉತ್ತರ ಇವರ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.

ಅಥವಾ

ಅರ್ಜುನ ಮತ್ತು ಉತ್ತರನ ಗುಣ ಸ್ವಭಾವಗಳಲ್ಲಿ ಯಾವ ವ್ಯತ್ಯಾಸಗಳು ಕಂಡುಬರುತ್ತವೆ?

❖ ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4x1=4

ಸ್ವತಂತ್ರ ಚಿಂತನೆಯನ್ನು ಮೈಗೂಡಿಸಿಕೊಂಡಿದ್ದ ವಿಶ್ವೇಶ್ವರಯ್ಯ ಅವರು ವೈಜ್ಞಾನಿಕ ಅನ್ವೇಷಣೆಗಾಗಿ ಸ್ವಂತ ಖರ್ಚಿನಲ್ಲಿ ಜಪಾನ್, ಯೂರೋಪ್ ಮತ್ತು ಅಮೆರಿಕಾ ದೇಶಗಳಿಗೆ ಭೇಟಿ ನೀಡಿದರು, ಪುಟಿಯುವ ಚೈತನ್ಯ ಅವರಲ್ಲಿತ್ತು. ನಾಳೆ ಮಾಡುವುದನ್ನು ಇಂದೇ ಮಾಡು, ಇಂದು ಮಾಡುವುದನ್ನು ಈಗಲೇ ಮಾಡು ಎಂಬ ತುಡಿತ ಅವರದ್ದಾಗಿತ್ತು. ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರಭಾವದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು. ಅದನ್ನು ತಡೆಯಲು ಎರಡೂ ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಿಸುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಿದರು. ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು.

ಪ್ರಶ್ನೆಗಳು :

27. ವಿಶ್ವೇಶ್ವರಯ್ಯ ಅವರು ಭೇಟಿ ನೀಡಿದ ದೇಶಗಳನ್ನು ಹೆಸರಿಸಿ.

28. ಹೈದರಾಬಾದ್ ನಗರದ ಎರಡು ನಗರಗಳನ್ನು ಹೆಸರಿಸಿ.

29. ವಿಶ್ವೇಶ್ವರಯ್ಯ ಅವರ ತುಡಿತ ಯಾವುದಾಗಿತ್ತು?

30. ಹೈದರಾಬಾದ್ ನಗರವನ್ನು ಪ್ರವಾಹದಿಂದ ರಕ್ಷಿಸಲು ವಿಶ್ವೇಶ್ವರಯ್ಯ ಅವರು ಏನು ಮಾಡಿದರು?

## ಭಾಗ-ಬಿ

❖ ಈ ಕೆಳಗಿನ ಹೇಳಿಕೆಗಳಿಗೆ ತಲಾ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. 12x1=12

31. 'ನಾವು' ಪದವು ಈ ರೀತಿಯ ಸರ್ವನಾಮವಾಗಿದೆ.

ಎ) ಪ್ರಥಮ ಪುರುಷ ಬಿ) ಉತ್ತಮ ಪುರುಷ ಸಿ) ಮಧ್ಯಮ ಪುರುಷ ಡಿ) ಅಧಮ ಪುರುಷ

32. 'ಶಾಲೆಗೆ' ಎಂಬುದು ಈ ವಿಭಕ್ತಿ ಪ್ರತ್ಯಯಕ್ಕೆ ಉದಾಹರಣೆಯಾಗಿದೆ.

ಎ) ಚತುರ್ಥೀ ಬಿ) ತೃತೀಯಾ ಸಿ) ಸಪ್ತಮೀ ಡಿ) ಷಷ್ಠೀ

33. 'ವರ' ಪದದ ಸಮಾನಾರ್ಥ

ಎ) ಉಡುಗೆ ಬಿ) ತೊಡುಗೆ ಸಿ) ಅಡುಗೆ ಡಿ) ಕೊಡುಗೆ

34. 'ಇಂದ್ರ' ಪದವು ಈ ನಾಮಪದದ ಗುಂಪಿಗೆ ಉದಾಹರಣೆ.

ಎ) ಅಂಕಿತನಾಮ ಬಿ) ರೂಢನಾಮ ಸಿ) ಅನ್ವರ್ಥನಾಮ ಡಿ) ಸರ್ವನಾಮ

35. 'ಬಡತನ' ಪದದ ವಿರುದ್ಧಾರ್ಥಕ ಪದ

ಎ) ಯೌವನ ಬಿ) ಸಿರಿತನ ಸಿ) ಗೆಳೆತನ ಡಿ) ಹಗೆತನ

36. 'ದೇವಾಲಯ' ಪದವು ಈ ಸಂಧಿಗೆ ಉದಾಹರಣೆ.

ಎ) ಸವರ್ಣದೀರ್ಘ ಬಿ) ಗುಣ ಸಿ) ಯಣ್ ಡಿ) ವೃದ್ಧಿ

37. 'ಆಶ್ಚರ್ಯ' ಪದದ ತದ್ಭವ ರೂಪ.

ಎ) ಗಜ್ಜರಿ ಬಿ) ಶೌರ್ಯ ಸಿ) ಧೈರ್ಯ ಡಿ) ಅಚ್ಚರಿ

38. ಷಟ್ಪದಿಯಲ್ಲಿ ಇಷ್ಟು ಸಾಲುಗಳಿರುತ್ತವೆ.

ಎ) ಮೂರು ಬಿ) ನಾಲ್ಕು ಸಿ) ಆರು ಡಿ) ಎರಡು

39. 'ತುದಿಮೂಗು' ಪದವು ಈ ಸಮಾಸಕ್ಕೆ ಉದಾಹರಣೆ.

ಎ) ದ್ವಿಗು ಬಿ) ದ್ವಂದ್ವ ಸಿ) ತತ್ಪುರುಷ ಡಿ) ಅಂಶಿ

40. 'ಕಟ್ಟಕಡೆಗೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆ.

ಎ) ಜೋಡುನುಡಿ ಬಿ) ದ್ವಿರುಕ್ತಿ ಸಿ) ಅನುಕರಣಾವ್ಯಯ ಡಿ) ನುಡಿಗಟ್ಟು

41. 'ಚೆನ್ನಾಗಿ' ಪದವು ಈ ಅವ್ಯಯಕ್ಕೆ ಉದಾಹರಣೆ.

ಎ) ಭಾವಸೂಚಕ ಬಿ) ಕ್ರಿಯಾರ್ಥಕ ಸಿ) ಸಾಮಾನ್ಯ ಡಿ) ಸಂಬಂಧಾರ್ಥಕ

42. 'ಮಗುವಿನ ಮುಖವು ಚಂದ್ರನಂತೆ ಮನೋಹರವಾಗಿದೆ' ಎಂಬ ವಾಕ್ಯವು ಈ ಅಲಂಕಾರಕ್ಕೆ ಉದಾಹರಣೆಯಾಗಿದೆ.

ಎ) ಉಪಮಾ ಬಿ) ರೂಪಕ ಸಿ) ಉತ್ಪ್ರೇಕ್ಷೆ ಡಿ) ದೃಷ್ಟಾಂತ

## ಭಾಗ-ಸಿ

43. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1x3=3

* ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ
* ಮನಸ್ಸಿದ್ದರೆ ಮಾರ್ಗ
* ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು.

44. ನಿಮ್ಮನ್ನು ಶ್ರೀರಾಂಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಮಲ್ಲಿಕಾರ್ಜುನ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ವಿಜ್ಞಾನ ವಸ್ತು ಪ್ರದರ್ಶನದ ವರದಿಯನ್ನು ಪ್ರಕಟಿಸುವಂತೆ ಕೋರಿ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ. 1x4=4

ಅಥವಾ

ನಿಮ್ಮನ್ನು ಬಾಪೂಜಿನಗರದ ನಿವಾಸಿ 'ರತ್ನ' ಎಂದು ಭಾವಿಸಿಕೊಂಡು ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ರಾಮನಗರದಲ್ಲಿರುವ ನಿಮ್ಮ ಅಕ್ಕ 'ಸೌಜನ್ಯ' ಎಂಬುವವರಿಗೆ ಪತ್ರ ಬರೆಯಿರಿ.

45. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1x4=4

* ಸ್ವಚ್ಛತಾ ಅಭಿಯಾನ
* ವರ್ತಮಾನ ಪತ್ರಿಕೆ
* ರಾಷ್ಟ್ರೀಯ ಹಬ್ಬಗಳು